**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ.1772/2017**

| | | |
|---|---|---|
| ಹೆಸರು | ಡಾ ರಾಘವೇಂದ್ರ | ಪ್ರಾ.ಸಾ.1 |
| ತಂದೆ/ಗಂಡನ ಹೆಸರು | ರಾಜ | ಚಾ.ಸಾ.3 |
| ವಯಸ್ಸು | 46 | |
| ಕೆಲಸ | ಹಿರಿಯ ತಜ್ಞರು | ಸಾ.ಪ್ರ.ವ.ಬೋ |
| ವಾಸ | ಬೆಂಗಳೂರು | 02.11.2023 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : –**

ಮೇ 2013 ರಿಂದ ಇಂದಿನವರೆಗೆ ರವರೆಗೆ ಸಾರ್ವಜನಿಕ ಆಸ್ಪತ್ರೆ ಹೊಸಕೊಟೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಚಾ.ಸಾ.1 ರವರು ದಿ:07.04.2017 ರಂದು 1:30 ಗಂಟೆಗೆ ನೆಡೆದ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ 4:30 ಗಂಟೆಗೆ ಆಸ್ಪತ್ರೆಗೆ ಬಂದಿದ್ದರು. ಈ ಕೆಳಕಂಡ ಗಾಯಗಳಾಗಿದ್ದು,

1. ಬಲಗಣ್ಣಿನ ಊತ
2. ಬಲಮೂಗಿನ ಮೇಲೆ ತರಚಿದ ಗಾಯ
3. ಮೇಲ್‌ತುಟಿಯ ಮೇಲೆ ತರಚಿದ ಗಾಯ

ಈ ಮೇಲೆ ಹೇಳಿದ 1 ರಿಂದ 3 ಗಾಯಗಳು ಸಾಮಾನ್ಯ ಸ್ವರೂಪದವಗಳಾಗಿದ್ದವು. ಸಾಕ್ಷಿ ಗಾಯದ ಪ್ರಮಾಣ ಪತ್ರದ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಪ್ರಮಾಣ ಪತ್ರವನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ –**

ಚಾ.ಸಾ.1 ರವರ ಜೊತೆ ಅವರ ತಂದೆ ಖಲೀಲ್ ಬೇಗ್ ಬಂದಿದ್ದರು. ನಿ.ಪಿ.1 ರಲ್ಲಿ ಚಾ.ಸಾ.1 ರವರು ಹಲ್ಲೆಯ ಬಗ್ಗೆ ಹೇಳಿರುವ ಮಾಹಿತಿಯ ಆಧಾರದ ಮೇಲೆ ನಮೂದಿಸಿರುತ್ತೇನೆ. ಚಾ.ಸಾ.1 ರವರಿಗೆ 4:30 ರಿಂದ 5:00 ಗಂಟೆಯ ವರೆಗೆ ಚಿಕಿತ್ಸೆ ನೀಡಿರುತ್ತೇನೆ. ಸದರಿಯವರು ಒಳರೋಗಿಯಾಗಿ ಚಿಕಿತ್ಸೆ ಪಡೆಯಲು ನಾನು ಸಲಹೆ ನೀಡಿರುವುದಿಲ್ಲ ಮತ್ತು ಅವರು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ನಿ.ಪಿ.1 ರಲ್ಲಿ ನಮೂದಿಸಿದ ಗಾಯಗಳು ಸಾಮಾನ್ಯವಾಗಿ, ಮಹಡಿ ಮೇಲಿಂದ ಬಿದ್ದಾಗ

ಸಂಭವಿಸಬಹುದಾದ ಗಾಯಗಳು ಎಂದರೆ ಸರಿ. ನಿ.ಪಿ.1 ರಲ್ಲಿ ಗಾಯಗಳ ವಯಸ್ಸನ್ನು ಹಾಗೂ ತಾಜಾ ಗಾಯಾಗಳಾಗಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.1 ಅನ್ನು ಪೋಲಿಸ್ ಸಿಬ್ಬಂದಿ ಸ್ವೀಕರಿಸಿ ನಮ್ಮ ಆಸ್ಪತ್ರೆಯ ಗಾಯ ಪ್ರಮಾಣಪತ್ರದ ನಕಲು ಪ್ರತಿಯಲ್ಲಿ ಸಹಿ ಮಾಡಿರುತ್ತಾರೆ. ಸದರಿ ನಕಲು ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಚಾ.ಸಾ.1 ರವರು ಆಸ್ಪತ್ರೆಗೆ ಬರದೇ ಇದ್ದರೂ ನಾನು ಅವರಿಗೆ ಚಿಕಿತ್ಸೆ ನೀಡಿರುತ್ತೇನೆ ಎಂದು ಚಾ.ಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**